ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ನಾಮಕರಣ.

Q: 158

ಶ್ರೀ ಜಿ. ಎಸ್. ಆಚಾರ್ (ಬ್ಯೆಂದೂರು) : ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯೋತ್ಪನ್ನ ಮಾರುಕಟ್ಟೆ ವಿಭಜನೆಯ ನಂತರ ನೇಮಕವಾದ ಸಮಿತಿಗಳನ್ನು ಪೂರ್ಣವಾಗಿ ನಾಮಕರಣ ಮಾಡದಿರಲು ಕಾರಣವೇನು?

ಆ) ವಿಭಜಿತ ಸಮಿತಿಗಳಿಗೆ ಸಲ್ಲಬೇಕಾದ ಸಂಪನ್ಮೂಲವನ್ನು ಮೂಲ ಸಮಿತಿಯಿಂದ ವಿಭಜಿಸಿ ಕೊಡಲಾಗಿದೆಯೇ? ಹಾಗಿದ್ದಲ್ಲಿ ಆಯಾ ಸಮಿತಿಗಳ ಪಾಲು ಏನು?

ಇ) ವಿಭಜಿತ ಸಮಿತಿಗಳ ನಕ್ಷೆಯಲ್ಲಿ ಮಾರುಕಟ್ಟೆ ಅಭಿವೃದ್ಧಿ ಸಲುವಾಗಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ?

ಶ್ರೀ ಮದನಗೋಪಾಲ ನಾಯಕ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯೋತ್ಪನ್ನ ಮಾರುಕಟ್ಟೆ ವಿಭಜನೆಯ ನಂತರ ಅಸ್ತಿತ್ವಕ್ಕೆ ಬಂದಿರುವ ಮಂಗಳೂರು, ಪುತ್ತೂರು ಮತ್ತು ಉಡುಪಿ ಮಾರುಕಟ್ಟೆಗಳಿಗೆ ಪ್ರತಿಯೊಂದಕ್ಕೂ 11 ಜನ ರೈತ ಸದಸ್ಯರನ್ನು ಒಬ್ಬ ವ್ಯಾಪಾರಸ್ಥರ ಪ್ರತಿನಿಧಿ ಸದಸ್ಯರನ್ನು ಮತ್ತು ಕೃಷಿ ಮಾರಾಟ ಇಲಾಖಾ ವತಿಯಿಂದ ಒಬ್ಬ ಸದಸ್ಯರನ್ನು ಈ ರೀತಿ ಒಟ್ಟು 13 ಜನರನ್ನು ಈಗಾಗಲೇ ನಾಮಕರಣ ಮಾಡಲಾಗಿದೆ. ಉಳಿದ ಅಂದರೆ ಮಾರುಕಟ್ಟೆ ಸಹಕಾರ ಸಂಘಗಳ ಅಡಳಿತ ಮಂಡಳಿಯ ಸದಸ್ಯರ ಪೈಕಿ ಒಬ್ಬರನ್ನು ಮತ್ತು ಕೃಷಿ ಉತ್ಪನ್ನಗಳ ಸಂಸ್ಕರಣ ಸಹಕಾರ ಸಂಘಗಳ ಆಡಳಿತ ಮಂಡಳಿಯ ಸದಸ್ಯರ ಪೈಕಿ ಒಬ್ಬರನ್ನು ನಾಮಕರಣ ಮಾಡಬೇಕಿದ್ದು, ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ನಿಯಮಾನುಸಾರ ವಿಭಜಿಸಿದ ಮಾರುಕಟ್ಟೆ ಸಮಿತಿಗಳಿಗೆ ಸಂಪನ್ಮೂಲವನ್ನು ಮೂಲಸಮಿತಿಯಿಂದ ವಿಭಜನೆ ಮಾಡಿಕೊಡಬೇಕಾಗಿದ್ದು. ಈ ದಿಸೆಯಲ್ಲಿ ಪೂರ್ವಭಾವಿ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಈಗಾಗಲೇ ಪುತ್ತೂರು ಹಾಗೂ ಉಡುಪಿ ಸಮಿತಿಗಳಿಗೆ ತಲಾ 10 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು ದಿನಾಂಕ : 21-2-93ರಂದು ನಡೆದ ಸಂಯುಕ್ತ ಸಭೆಯಲ್ಲಿ ಪುತ್ತೂರಿಗೆ ರೂ.60 ಲಕ್ಷ ಹಾಗೂ ಉಡುಪಿಗೆ ರೂ.11 ಲಕ್ಷ ಬಿಡುಗಡೆ ಮಾಡಲು ತಿಳಿಸಿದೆ. ಆದ್ದರಿಂದ ವಿಭಜಿತ ಸಮಿತಿಗಳ ಪಾಲು ಎಷ್ಟು ಎಂಬುದನ್ನು ಸದ್ಯದಲ್ಲಿಯೇ ನಿಗದಿ ಪಡಿಸಲಾಗುವುದು.

ಇ) ವಿಭಜಿತ ಮಾರುಕಟ್ಟೆ ಸಮಿತಿಗಳಾದ ಪುತ್ತೂರು ಮತ್ತು ಉಡುಪಿ ಮಾರುಕಟ್ಟೆ ಸಮಿತಿಗಳ ಪ್ರಾಂಗಣದಲ್ಲಿ ಉದ್ದೇಶಿತ ಸೌಲಭ್ಯಗಳನ್ನು ಒದಗಿಸುವ ತಃಖ್ತೆಯನ್ನು ಲಗತ್ತಿಸಲಾಗಿದೆ.

ಉಡುಪಿ ಮತ್ತು ಪುತ್ತೂರು ಮಾರುಕಟ್ಟೆ ಪ್ರಾಂಗಣಗಳಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಕಾರ್ಯಗಳ ತೋರಿಸುವ ತಃಖ್ತೆ

1. ಉಡುಪಿ ಮಾರುಕಟ್ಟೆ ಪ್ರಾಂಗಣ :
ಅಭಿವೃದ್ಧಿ ಕಾರ್ಯ :

1. ಕುಡಿಯುವ ನೀರಿನ ಹೊಸ ವ್ಯವಸ್ಥೆ
2. ಹರಾಜು ಕಟ್ಟೆ ಮತ್ತು ಗೋದಾಮುಗಳ ಸುತ್ತಾ ಕಾಂಕ್ರೀಟ್ ಫ್ಲಾಗಿಂಗ್ ಒದಗಿಸುವುದು.
3. ಒಳ ರಸ್ತೆಗಳ ಉಳಿದ ಭಾಗದ ಡಾಂಬರೀಕರಣ.
4. ಮಾರುಕಟ್ಟೆ ಪ್ರಾಂಗಣದ ಎರಡು ಕಡೆ ಆವರಣ ಗೋಡೆ ನಿರ್ಮಾಣ.
5. ಆಡಳಿತ ಕಛೇರಿ-ಪ-ಅಂಚೆ ಕಛೇರಿ-ಪ-ಬ್ಯಾಂಕ್ ಕಟ್ಟಡ.
6. ಹರಾಜುಕಟ್ಟೆಗಳ ನಿರ್ಮಾಣ (7).
7. ಗೋದಾಮುಗಳು ಮತ್ತು ಹರಾಜು ಕಟ್ಟೆಗಳಿಗೆ ಈವ್ ಗಟರ್ಸ್ ನಿರ್ಮಾಣ.
8. ವಾಚ್‌ಮ್ಯಾನ್ ಮತ್ತು ಜವಾನರುಗಳ ವಸತಿಗೃಹ ಸುತ್ತ ಆವರಣ ಗೋಡೆ ನಿರ್ಮಾಣ.

2. ಕುಂದಾಪುರ ಉಪ ಮಾರುಕಟ್ಟೆ ಪ್ರಾಂಗಣ :
1. ಮೀನು ಮಾರುಕಟ್ಟೆಯಿಂದ ಕುಂದಾಪುರ ಉಪ ಮಾರುಕಟ್ಟೆ ಪ್ರಾಂಗಣ ಸೇರಿಸುವ ಪ್ರಸ್ತುತ ರಸ್ತೆಗೆ ಡಾಂಬರೀಕರಣ ಮಾಡುವುದು.
2. ಕುಡಿಯುವ ನೀರಿನ ಹೊಸ ವ್ಯವಸ್ಥೆ.
3. ಜವಾನರು ಮತ್ತು ವಾಚ್‌ಮ್ಯಾನ್‌ಗಳಿಗೆ ವಸತಿಗೃಹ ನಿರ್ಮಾಣ.
4. ಗೋದಾಮು ಮತ್ತು ಹರಾಜುಕಟ್ಟೆ ಸುತ್ತಾ ಫ್ಲಾಗಿಂಗ್ ಮಾಡುವುದು.
5. ಉಪ ಮಾರುಕಟ್ಟೆ ಪ್ರಾಂಗಣದ ಸುತ್ತಾ ಮೂರು ಕಡೆ ಆವರಣ ಗೋಡೆ ನಿರ್ಮಾಣ.

3. ಮಂಗಳೂರು : (ಬೈಕಂಪಾಡಿ):

1. 78 ಅಂಗಡಿ-ಪ-ಗೋದಾಮುಗಳ ನಿರ್ಮಾಣ (ಬ್ಲಾಕ್-1)
2. 74 ಅಂಗಡಿ-ಪ-ಗೋದಾಮುಗಳ ನಿರ್ಮಾಣ (ಬ್ಲಾಕ್-2)
3. ಹರಾಜುಕಟ್ಟೆ -ಪ-ಅಂಗಡಿ
4. ಶೌಚಾಲಯ ವ್ಯವಸ್ಥೆ
5. ಆಡಳಿತ ಕಛೇರಿ ಕಟ್ಟಡ
6. ವ್ಯಾಪಾರ ಸಂಕೀರ್ಣ
7. ಸೆಂಟ್ರಲ್ ಫೆಸಿಲಿಟಿ ಕಟ್ಟಡ
8. ಕ್ಯಾಂಟೀನ್ ಕಟ್ಟಡ
9. ರಸ್ತೆ ಡಾಂಬರೀಕರಣ

4. ಪುತ್ತೂರು ಮಾರುಕಟ್ಟೆ ಪ್ರಾಂಗಣ :

1. ಅರುಣಾ ಟಾಕೀಸ್‌ನಿಂದ ಪುತ್ತೂರು ಉಪ ಮಾರುಕಟ್ಟೆ ಪ್ರಾಂಗಣದ ಕೂಡು ರಸ್ತೆಗೆ 150 ಮೀಟರ್ ಉದ್ದದ ಚರಂಡಿ ನಿರ್ಮಾಣ.
2. ಅಗ್ನಿಶಾಮಕ ವಾಹನದ ನಿಲುಗಡೆಗೆ ಎರಡು ತಾತ್ಕಾಲಿಕ ಶೆಡ್ ನಿರ್ಮಾಣ.
3. ಒಳರಸ್ತೆಗಳ ನಿರ್ಮಾಣ ಹಾಗೂ ಎನ್.ಜಿ.ಆರ್.ಜಿ. ಗೋದಾಮುಗಳ ಮುಂಭಾಗದ ರಸ್ತೆ ದುರಸ್ತೀಕರಣ.
4. ನೆಲ ಮಾಳಿಗೆಗಳನ್ನು ಗೋದಾಮುಗಳನ್ನಾಗಿ ಪರಿವರ್ತಿಸುವುದು.
5. ಎನ್.ಜಿ.ಆರ್.ಜಿ. ಗೋದಾಮುಗಳ ಮುಂದಿನ ರಸ್ತೆಗಳ ಡಾಂಬರೀಕರಣ.
6. ಹೊಸದಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಸಮತಟ್ಟು ಮಾಡುವುದು.

5. ಸುಳ್ಯ ಉಪ ಮಾರುಕಟ್ಟೆ ಪ್ರಾಂಗಣ :

1. ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಒಳರಸ್ತೆ ಮತ್ತು ಚರಂಡಿ ನಿರ್ಮಾಣ.

ವಿಷಯ : ರಾಯಚೂರು ಜಿಲ್ಲೆಯಲ್ಲಿ ನೆರೆ ಹಾವಳಿಗೆ ಪರಿಹಾರ.

Q: 361

ಶ್ರೀ ಜಿ. ಹಂಪನಗೌಡ (ಸಿಂಧನೂರು) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯ ನೆರೆ ಹಾವಳಿಗೆ ಸರ್ಕಾರ ಎಷ್ಟು ಪರಿಹಾರ ಧನ ಬಿಡುಗಡೆ ಮಾಡಿದೆ?

ಆ) ನೆರೆ ಹಾವಳಿಯಿಂದ ಪೂರ್ಣ ಬಿದ್ದ ಮನೆಗಳು ಎಷ್ಟು ಮತ್ತು ಭಾಗಶಃ ಬಿದ್ದ ಮನೆಗಳು ಎಷ್ಟು?

ಇ) ಸರ್ವೆ ಮಾಡುವಾಗ ಅಥವಾ ಪರಿಹಾರ ಧನ ವಿತರಣೆ ಮಾಡುವಾಗ ಬಿಟ್ಟ ಮನೆಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ರಾಯಚೂರು ಜಿಲ್ಲೆಗೆ ನೆರೆ ಹಾವಳಿ ಪರಿಹಾರ ಕಾರ್ಯಗಳಿಗೆ 1,590.55 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದೆ.

ಆ) ನೆರೆ ಹಾವಳಿಯಿಂದ ಹಾನಿಗೊಳಗಾದ ಮನೆಗಳ ವಿವರ ಈ ಕೆಳಕಂಡಂತಿದೆ-

ಪೂರ್ಣವಾಗಿ ಬಿದ್ದ ಮನೆಗಳ ಸಂಖ್ಯೆ	-	12,947
ಭಾಗಶಃ ಬಿದ್ದ ಮನೆಗಳ ಸಂಖ್ಯೆ	-	76,380
ಒಟ್ಟು	-	89,327

ಇ) ಪರಿಹಾರ ಧನ ವಿತರಣೆ ಮಾಡುವಾಗ ಕೆಲವು ಪ್ರಕರಣಗಳು ಬಿಟ್ಟು ಹೋಗಿರುವ ಬಗ್ಗೆ,